... ಪೂರ್ಣಮ್ पूर्णम പൂർണമ് पूर्णम् ପୂର୍ଣମ୍ ਪੂਰਣਮ੍ பூர்ணம் పూర్ణమ్ પૂર્ણમ ...

पूर्णमदः पूर्णमिदं पूर्णात् पूर्णमुदच्यते |
पूर्णस्य पूर्णमादाय पूर्णमेवावशिष्यते ||

# Pūrṇam

## A Journal of Indian Knowledge Systems

( Website: https://purnam.vercel.app, https://purnam.ac.in )

Portraying the attempts of scholars and scientists……..

…….. to understand the contributions of Bharatiya Heritage and SAINTists™

*Pūrṇam* Vol. 1 No.2 July - December 2025 Pages: 16 – 20 ISSN: 3049-3587 (Print)

## Education System

# ಆಧುನಿಕ ಶಿಕ್ಷಣ ಪದ್ಧತಿಗೆ ಉಪನಿಷತ್ತುಗಳು : ಪೂರಕ ಹಾಗೂ ಪ್ರೇರಕ

**ಲಕ್ಷ್ಮೀಕಾಂತ ವಿ. ಮೊಹರೀರ**

*[The Ideological Research Foundation (R.), ಬೆಂಗಳೂರು, ಮೊ. 9060931359]*

## Abstract

*The Upanishads are complementary and inspirational to the modern education system. In the Indian perspective, education is not merely for livelihood but also serves as a spiritual foundation. It is conceived as the path that leads towards self-realization. Education can broadly be defined as achieving the complete personal development of the child, thereby enabling them to make a fundamental contribution to human life according to their capacity. The term 'Upanishad' literally means discussing philosophical subjects while sitting near the Guru (teacher). In another interpretation, it means going closer to Moksha, which is the ultimate bliss (Paramaananda). During this period, education was driven by the goal of obtaining perfect knowledge and spiritual brilliance (Brahmavarchassu). Essential goals of learning included the study of the Vedas, Puranas, history (Itihasa), and the Upanishads along with all the lifeskills required for a successful living. As stated in the Brihadaranyaka Upanishad, the learning process involved three main stages: Shravana (listening), Manana (reflection), and Nidhidhyasana (deep contemplation). The duration of student life typically lasted for 12 years, during which the student was given high importance. The ancient Indian education system has provided guidance to the present education system. Today, the Upanishads are helpful in promoting good values and offer ideas that support teaching in the correct manner. If the ideal values mentioned in the Upanishads are introduced to today's students, there is no doubt that a worthy nation will be constructed.*

**Keywords:** *Upanishads, Education System, Self-Realization, Gurukula, Svadhyaya, Modern Education.*

*ಆಧುನಿಕ ಶಿಕ್ಷಣ ಪದ್ದತಿಗೆ ಉಪನಿಷತ್ತುಗಳು ಹೇಗೆ ಪೂರಕ ಹಾಗೂ ಪ್ರೇರಕವಾಗಿವೆ ಎಂಬುದರ ಕುರಿತು ಈ ಪ್ರಬಂಧ ವಿಚಾರ ಮಾಡುತ್ತದೆ. ಭಾರತೀಯರ ದೃಷ್ಟಿಯಲ್ಲಿ ಶಿಕ್ಷಣವು ಕೇವಲ ಜೀವನೋಪಾಯಕ್ಕೆ ಮಾತ್ರವಲ್ಲದೆ, ಆತ್ಮ ಸಾಕ್ಷಾತ್ಕಾರದ ಕಡೆಗೆ ಕೊಂಡೊಯ್ಯುವ ಆಧ್ಯಾತ್ಮಿಕ ಬುನಾದಿಯೂ ಆಗಿದೆ. ಉಪನಿಷತ್ತುಗಳ ಪ್ರಕಾರ, ಶಿಕ್ಷಣದ ಪರಮ ಗುರಿಯು ಮೋಕ್ಷವಾಗಿರುತ್ತದೆ. ಶಿಕ್ಷಣ ಎಂದರೆ ಮಗುವಿನ ಸಂಪೂರ್ಣ ವೈಯಕ್ತಿಕ ಬೆಳವಣಿಗೆಯನ್ನು ಸಾಧಿಸುವ ಮೂಲಕ ಮಾನವ ಜೀವನಕ್ಕೆ ಮೂಲ ಕಾಣಿಕೆ ನೀಡುವಂತೆ ಮಾಡುವುದು ಎಂದು ಹೇಳಬಹುದು. ಉಪನಿಷತ್ ಪದದ ಅರ್ಥ ಗುರುವಿನ ಬಳಿ ಕುಳಿತು ತತ್ವಶಾಸ್ತ್ರೀಯ ವಿಷಯಗಳನ್ನು ಚರ್ಚಿಸುವುದು ಅಥವಾ ಪರಮಾನಂದವಾದ ಮೋಕ್ಷದ ಸಮೀಪ ಹೋಗುವುದು ಎಂದಾಗಿದೆ. ಈ ಅವಧಿಯಲ್ಲಿ ಪರಿಪೂರ್ಣ ಜ್ಞಾನ ಮತ್ತು ಬ್ರಹ್ಮವರ್ಚಸ್ಸನ್ನು ಪಡೆಯುವ ಗುರಿಯೊಂದಿಗೆ ಶಿಕ್ಷಣವು ಸಾಗುತ್ತಿತ್ತು. ವೇದಾಧ್ಯಯನ, ಪುರಾಣ, ಇತಿಹಾಸ ಮತ್ತು ಉಪನಿಷತ್ತುಗಳ ಕಲಿಕೆಯು ಈ ಕಾಲದ ಪ್ರಮುಖ ಗುರಿಯಾಗಿತ್ತು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ತಿಳಿಸಿರುವಂತೆ, ಶ್ರವಣ, ಮನನ, ನಿದಿಧ್ಯಾಸನಗಳು ಕಲಿಕೆಯ ಪ್ರಕ್ರಿಯೆಯ ಮುಖ್ಯ ಹಂತಗಳಾಗಿದ್ದವು. ವಿದ್ಯಾರ್ಥಿ ಜೀವನದ ಅವಧಿಯು ಸಾಮಾನ್ಯವಾಗಿ 12 ವರ್ಷಗಳ ಕಾಲ ನಡೆಯುತ್ತಿತ್ತು, ಮತ್ತು ಈ ಸಮಯದಲ್ಲಿ ವಿದ್ಯಾರ್ಥಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿತ್ತು. ಗುರುಕುಲಗಳಲ್ಲಿ ವಿದ್ಯಾರ್ಥಿಗಳು ನಿತ್ಯ ಕಾರ್ಯಗಳನ್ನು ನಿರ್ವಹಿಸುತ್ತಾ ದೈನಂದಿನ ಜೀವನದ ಸವಾಲುಗಳನ್ನು ಎದುರಿಸಲು, ಸಮಸ್ಯೆಗಳನ್ನು ಪರಿಹರಿಸಲು ಮತ್ತು ಆರೋಗ್ಯಕರ, ಯಶಸ್ವಿ ಬದುಕನ್ನು ನಡೆಸಲು ವಿದ್ಯಾಭ್ಯಾಸ ಮಾಡುತ್ತಿದ್ದರು. ಪ್ರಾಚೀನ ಭಾರತದ ಶಿಕ್ಷಣ ವ್ಯವಸ್ಥೆಯು ಇಂದಿನ ಶಿಕ್ಷಣ ವ್ಯವಸ್ಥೆಗೆ ಮಾರ್ಗದರ್ಶನ ನೀಡಿದೆ. ಇಂದು ಉಪನಿಷತ್ತುಗಳು ಉತ್ತಮ ಮೌಲ್ಯಗಳನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಿವೆ ಮತ್ತು*

*ಸರಿಯಾದ ಕ್ರಮದಲ್ಲಿ ಶಿಕ್ಷಣ ನೀಡಲು ಪೂರಕವಾದ ವಿಚಾರಗಳನ್ನು ಒದಗಿಸುತ್ತವೆ. ಉಪನಿಷತ್ತುಗಳಲ್ಲಿ ಹೇಳಲಾದ ಆದರ್ಶ ಮೌಲ್ಯಗಳ ಬಗ್ಗೆ ಪರಿಚಯ ಪಡೆದು ಇಂದಿನ ವಿದ್ಯಾರ್ಥಿಗಳಿಗೆ ತಿಳಿಸಿದರೆ, ಯೋಗ್ಯ ರಾಷ್ಟ್ರ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ ಮತ್ತು ಅನಿವಾರ್ಯವೂ ಕೂಡ ಎಂಬುದು ಈ ಪ್ರಬಂಧದ ಮುಖ್ಯ ಸಂದೇಶ*

***ಸಂಕೇತ ಪದಗಳು :*** *ಉಪನಿಷತ್ತುಗಳು, ಶಿಕ್ಷಣ ಪದ್ಧತಿ, ಆತ್ಮ ಸಾಕ್ಷಾತ್ಕಾರ, ಗುರುಕುಲ, ಸ್ವಸ್ವಾಧ್ಯಾಯ, ಆಧುನಿಕ ಶಿಕ್ಷಣ.*

## ಪೀಠಿಕೆ

ಮಾನವನು ಪ್ರಾಣಿ ಜಗತ್ತಿನಲ್ಲಿಯೇ ಸರ್ವ ಶ್ರೇಷ್ಠ ಹಾಗೂ ಬುದ್ಧಿವಂತ ಪ್ರಾಣಿಯಾಗಿದ್ದಾನೆ. ಅವನಲ್ಲಿ ವಿಶೇಷವಾದ ಗುಣಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೇ, ಮಾತನಾಡುವ ಶಕ್ತಿ, ಆಲೋಚನಾ ಶಕ್ತಿ, ಬುದ್ಧಿ ಶಕ್ತಿ, ಹೊಂದಾಣಿಕಾ ಶಕ್ತಿ ಆದರೂ ಕೂಡಾ ಮಾನವನು ಇತರೆ ಪ್ರಾಣಿಗಳಿಗೆ ಹೋಲಿಸಿ ನೋಡಿದರೆ ಅವಲಂಬಿತ ಜೀವಿಯಾಗಿದ್ದಾನೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವಿತದ ಅವಧಿಯಲ್ಲಿ ಬುದ್ಧಿವಂತಿಕೆಯೊಂದಿಗೆ ವಿವಿಧ ಪ್ರಯೋಗಗಳೊಂದಿಗೆ ತನ್ನ ಜೀವನವನ್ನು ಸುಖಮಯ ಹಾಗೂ ಸುಂದರಮಯವನ್ನಾಗಿ ಮಾಡಲು ಪಡೆಯುವ ಅನುಭವವೇ ಶಿಕ್ಷಣವಾಗಿದೆ.

ಭಾರತೀಯರ ದೃಷ್ಟಿಯಲ್ಲಿ ಶಿಕ್ಷಣ ಜೀವನೋಪಾಯಕ್ಕೆ ಮಾತ್ರವಲ್ಲ ಅಧ್ಯಾತ್ಮಿಕ ಬುನಾದಿಯು ಹೌದು. ಹಾಗೆಯೇ ಆತ್ಮ ಸಾಕ್ಷಾತ್ಕಾರದೆಡೆಗೆ ಕೊಂಡೊಯ್ಯುವ ಮಾರ್ಗವು ಹೌದು ಎನ್ನುವ ಕಲ್ಪನೆಯಾಗಿದೆ. ಇದನ್ನು ಈ ಮುಂದಿನ ವ್ಯಾಖ್ಯೆಗಳು ಸ್ಪಷ್ಟಪಡಿಸುತ್ತವೆ.

**ಋಗ್ವೇದ :** 'ಯಾವುದು ಮಾನವನನ್ನು ಸ್ವಾವಲಂಬಿಯನ್ನಾಗಿ, ನಿಸ್ವಾರ್ಥಿಯನ್ನಾಗಿ ಮಾಡುತ್ತದೆಯೋ ಅದುವೇ ಶಿಕ್ಷಣ'.

**ಉಪನಿಷತ್ತು :** 'ಯಾವುದರ ಪರಮ ಗುರಿಯು ಮೋಕ್ಷವಾಗಿರುತ್ತದೆಯೋ ಅದುವೇ ಶಿಕ್ಷಣ'.

**ಯಾಜ್ಞವಲ್ಕ್ಯ :** 'ಮಾನವನನ್ನು ಸಚ್ಚಾರಿತ್ರ್ಯ ಹಾಗೂ ಉಪಯುಕ್ತನನ್ನಾಗಿ ಮಾಡುವುದೇ ಶಿಕ್ಷಣ'.

**ಸ್ವಾಮಿ ವಿವೇಕಾನಂದ :** 'ವ್ಯಕ್ತಿಯಲ್ಲಿ ಸೂಕ್ತವಾಗಿರುವ ದೈವತ್ವವನ್ನು ಸೆಳೆಯುವುದೇ ಶಿಕ್ಷಣ'.

**ಗಾಂಧೀಜಿ :** 'ಮಗುವಿನಲ್ಲಿ ಸೂಕ್ತವಾಗಿ ಅಡಕವಾಗಿರುವ ಚೇತನವನ್ನು ವಿಕಸಿಸುವಂತೆ ಮಾಡುವುದು ಮತ್ತು ಸಹಜವಾಗಿ ಪಡೆದಿರುವ ಸತ್ವ ಸಾಮರ್ಥ್ಯಗಳನ್ನು ಬಹಿರಂಗಗೊಳಿಸುವುದೇ ಶಿಕ್ಷಣ'

### ಶಿಕ್ಷಣದ ಕುರಿತು ಪಾಶ್ಚಿಮಾತ್ಯ ಚಿಂತಕರ ವ್ಯಾಖ್ಯೆಗಳು:

**ಪ್ಲೇಟೋ :** 'ಸುಖ–ದುಃಖಗಳನ್ನು ಸಮನಾಗಿ ಹಂಚಿಕೊಳ್ಳುವ ಶಕ್ತಿಯನ್ನು ಕೊಡುವುದೇ ಶಿಕ್ಷಣ.'

**ಅರಿಸ್ಟಾಟಲ್ :** 'ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸನ್ನು ನಿರ್ಮಿಸುವುದೇ ಶಿಕ್ಷಣ.'

**ರಾಸ್ :** 'ಅಮೂಲ್ಯ ವ್ಯಕ್ತಿತ್ವದ ವಿಕಾಸ ಮತ್ತು ಅಧ್ಯಾತ್ಮಿಕ ಬೆಳವಣಿಗೆಯೇ ಶಿಕ್ಷಣ.'

**ಹೆಚ್.ಜಿ.ವೇಲ್ಸ್ :** 'ವ್ಯಕ್ತಿಯಲ್ಲಿ ಅಡಗಿರುವ ಅಮೃತತ್ವವು ವಿಕಸಿಸಿ ಅವನ ಆತ್ಮ ವಿರಾಜಿಸುವಂತೆ ಮಾಡುವುದೇ ಶಿಕ್ಷಣ.'

ಒಟ್ಟಾರೆಯಾಗಿ ಶಿಕ್ಷಣವೆಂದು ಹೇಳುವುದಾದರೆ ಮಗುವಿನ ಸಂಪೂರ್ಣ ವೈಯಕ್ತಿಕ ಬೆಳವಣಿಗೆ ಮಾಡುವ ಮೂಲಕ ಅವನ ಸಾಮರ್ಥ್ಯಕ್ಕೆ ತಕ್ಕಂತೆ ಮಾನವ ಜೀವನಕ್ಕೆ ಮೂಲ ಕಾಣಿಕೆಯಾಗಿವುದಂತೆ ಮಾಡುವದೇ ಶಿಕ್ಷಣವಾಗಿದೆ ಎಂದು ಹೇಳಬಹುದು.

ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವಂತೆ ಮಾಡುವುದೇ ಶಿಕ್ಷಣದ ಗುರಿಯಾಗಿರುವುದರಿಂದ ಮಹಾತ್ಮಾಗಾಂಧಿ, ಸ್ವಾಮಿ ವಿವೇಕಾನಂದ, ಅರವಿಂದ ಘೋಷ, ರವೀಂದ್ರನಾಥ ಟ್ಯಾಗೋರರು ಶಿಕ್ಷಣದಲ್ಲಿ ಭಾರತೀಯ ಸಂಸ್ಕೃತಿಯ ಆದರ್ಶ ಮೌಲ್ಯಗಳ ಅಳವಡಿಕೆಗೆ ಒತ್ತಾಯಿಸಿದರು. ಅದರಂತೆ ಸ್ವತಂತ್ರ ಭಾರತದಲ್ಲಿ ನೇಮಕಗೊಂಡ ಶಿಕ್ಷಣ ಆಯೋಗಗಳು ಸಹ ಒತ್ತಾಯಿಸಿವೆ.

ಉತ್ತಮ ಶಿಕ್ಷಣವನ್ನು ಪಡೆಯಬೇಕಾದ ವಿಷಯಗಳನ್ನು ಅವಲೋಕಿಸಿದ ಬಳಿಕ ಉತ್ತರ ವೇದಗಳ ಕಾಲದ ಶಿಕ್ಷಣ ಯಾವ ತೆರನಾಗಿ ನಮ್ಮ ದೇಶದಲ್ಲಿ ಅನಾವರಣಗೊಂಡಿತ್ತು ಎಂಬ ವಿಷಯದತ್ತ ಹೊರಳೋಣ.

ಉತ್ತರ ವೇದಗಳ ಕಾಲದ ಶಿಕ್ಷಣವನ್ನು ಉಪನಿಷತ್ ಕಾಲದ ಶಿಕ್ಷಣವೆಂದೂ ಸಹ ಕರೆಯುತ್ತಾರೆ. ಜೀವನವನ್ನು ದೈವಾಂಶಸಂಭೂತಗೊಳಿಸಿದ್ದು ದೇವರು, ಆತ್ಮ, ಜಗತ್ತು, ಹುಟ್ಟು, ಸಾವು ಮುಂತಾದವುಗಳೆಲ್ಲ ಮಾನವೇತರ ಅರ್ಥಾತ್ ದೈವೀಚ್ಛೆಗೆ ಅನುಗುಣವಾಗಿ ನಡೆಯುತ್ತವೆ ಎಂಬ ಕಲ್ಪನೆ ಬಲಗೊಂಡಿದ್ದು ಈ ಅವಧಿಯ ವೈಶಿಷ್ಟ್ಯ. ಈ ರೀತಿಯ ಭಾವನೆಗಳು ಮತ್ತು ಅನುಭವಗಳು ಅರಣ್ಯಕಗಳು ಹಾಗೂ ಬ್ರಾಹ್ಮಣಕಗಳೂ ಆಗಿ ರೂಪ ತಾಳಿದವು. ನಂತರ 'ಉಪನಿಷತ್'ಗಳು ಅಸ್ತಿತ್ವಕ್ಕೆ ಬಂದವು.

## ಉಪನಿಷತ್ ಪದದ ಪಾರಿಭಾಷಿಕ ಅರ್ಥ:

'ಉಪ' ಮತ್ತು 'ನಿ' ಉಪಸರ್ಗಗಳಿಂದ ಕೂಡಿದ 'ಷದ' ಧಾತುವಿಗೆ 'ಕ್ವಿಪ್' ಪ್ರತ್ಯಯ ಸೇರಿದಾಗ 'ಉಪನಿಷದ್' ಎಂಬ ಪದವು ನಿಷ್ಪತ್ತಿಯಾಗುತ್ತದೆ. ಉಪನಿಷತ್ ಎಂದರೆ ಗುರುವಿನ ಬಳಿ ಕುಳಿತು ತತ್ವಶಾಸ್ತ್ರೀಯ ವಿಷಯಗಳನ್ನು ಚರ್ಚಿಸುವುದು ಎಂದರ್ಥ.

ಇನ್ನೊಂದೆಡೆ ಈ ವಿಷಯಕ್ಕೆ ಸಂಬಂಧಿಸಿದಂತೆ 'ಉಪನಿಷತ್ತೆಂಬ ಮಾತಿಗೆ ಅರ್ಥವಾದರೂ ಏನು?' ಈ ಮಾತಿಗೆ ಮೂಲ ಸಾಮಾಗ್ರಿ 'ಸದ್' ಎನ್ನುವ ಧಾತು. ಈ ಧಾತುವಿಗೆ 'ಕುಳಿತುಕೊಳ್ಳುವುದು' ಎಂಬ ಅರ್ಥವಿದೆ ಎಂದು ಹೇಳಲಾಗಿದೆ. ಇನ್ನೊಂದರ್ಥದಲ್ಲಿ 'ಪರಮಾನಂದವಾದ ಮೋಕ್ಷದ ಸಮೀಪ ಹೋಗುವುದು' ಎಂದಾಗುತ್ತದೆ.

## ಶಿಕ್ಷಣ ಪದ್ಧತಿ :

ಶಿಕ್ಷಣವು ಜೀವನ ಪರವಾದದ್ದು. ಉಪನಿಷದ್ ಕಾಲದ ವೈಶಿಷ್ಟ್ಯಗಳಲ್ಲೊಂದು ಪರಿಪೂರ್ಣ ಜ್ಞಾನ ಮತ್ತು ಬ್ರಹ್ಮವರ್ಚಸ್ಸನ್ನು ಪಡೆಯುವ ಗುರಿಯೊಂದಿಗೆ ಶಿಕ್ಷಣವು ಸಾಗಿತ್ತು. ಯಜ್ಞಗಳು ಕೂಡಾ ಇದೆ ಗುರಿಯೊಂದಿಗೆ ನೇರವೇರಿಸಲ್ಪಡುತ್ತಿದ್ದು, ಜೊತೆಗೆ ಸ್ವಾಧ್ಯಾಯವು ಪ್ರಧಾನ ಮಾರ್ಗವಾಗಿತ್ತು. ಆಧ್ಯಾತ್ಮಿಕ ಜ್ಞಾನ ಅಥವಾ ಬ್ರಹ್ಮವರ್ಚಸ್ಸನ್ನು ಪಡೆಯುವುದಕ್ಕೋಸ್ಕರ ಸ್ವಾಧ್ಯಾಯದಲ್ಲಿ ಕೊಡಲಾಗುತ್ತಿತ್ತು.

ಬ್ರಹ್ಮ ಮತ್ತು ವ್ಯಕ್ತಿಯ ಮಧ್ಯ ಸಾಮರಸ್ಯವನ್ನೇರ್ಪಡಿಸಲು ಈ ಮೂಲಕ ವ್ಯಕ್ತಿತ್ವವನ್ನು ಉಜ್ವಲವಾಗಿಸುವ ಆಶಯವು ಸ್ವಾಧ್ಯಾಯದಲ್ಲಿ ಅಡಕವಾಗಿತ್ತು.

### ಈ ಕಾಲದ ಶಿಕ್ಷಣದ ಗುರಿಗಳು ಮತ್ತು ಉದ್ದೇಶಗಳು :

೧. ವೇದಾಧ್ಯಯನ, ಪುರಾಣ, ಇತಿಹಾಸ ಮತ್ತು ಉಪನಿಷತ್‌ಗಳು ಕಲಿಕೆಯ ಅಗತ್ಯದ ಗುರಿಯಾಗಿತ್ತು.
೨. ವಿದ್ಯಾರ್ಥಿ ಜೀವನದಲ್ಲಿ ಆಧ್ಯಾತ್ಮಿಕ ಮಹತ್ವವನ್ನು ಬೆಳೆಸಿ ಮಾನವ ಜನಾಂಗದ ಏಳ್ಗೆಯನ್ನು ತಂದು ಕೊಡುವ ಗುರಿಯನ್ನು ಶಿಕ್ಷಣ ಹೊಂದಿತ್ತು.
೩. ವೇದಗಳ ಕಾಲದಲ್ಲಿದ್ದಂತೆ ಇಲ್ಲಿಯೂ ಕೂಡ ಬ್ರಹ್ಮಚರ್ಯ ಪರಿಪಾಲನೆಯ ಗುರಿಯನ್ನು ಅಳವಡಿಸಿಕೊಳ್ಳಲಾಗಿತ್ತು.
೪. ಶಿಕ್ಷಣದ ಮೂಲಕ ಆತ್ಮ ಸಾಕ್ಷಾತ್ಕಾರವನ್ನು ಪಡೆಯುವುದು.
೫. ವ್ಯಕ್ತಿಯ ಸರ್ವಾಂಗೀಣ ವಿಕಾಸ ಹೆಚ್ಚಿಸುವುದು.

## ಗುರು-ಶಿಷ್ಯರ ಸಮಾಗಮ :

ವೇದಗಳ ಕಾಲದಲ್ಲಿ ಉಪನಯನದೊಂದಿಗೆ ವಿದ್ಯಾಭ್ಯಾಸ ಆರಂಭವಾಗುತ್ತಿದ್ದರೆ ಉಪನಿಷತ್ ಅವಧಿಯಲ್ಲಿ ಐದು ವರ್ಷ ತುಂಬಿದ ಮಗುವಿನ ವಿದ್ಯಾರಂಭ ಸಮಾರಂಭದೊಂದಿಗೆ ಆರಂಭವಾಗುತ್ತಿತ್ತು. ಈ ಸಮಾರಂಭದಲ್ಲಿ ಮಗುವಿನ ವಂಶ, ಕುಲ, ವ್ಯಕ್ತಿಗತ ಗುಣಗಳು, ಸೇವಾ ಮನೋಭವ ಮತ್ತು ಗುರುಕೈಂಕರ್ಯ ಗುಣಗಳನ್ನು ಪರಿಕ್ಷೀಸಿ ಗುರುಕುಲಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು.

'ತೈತ್ತಿರೀಯೋಪನಿಷತ್' ಮೊದಲನೆಯ 'ವಲ್ಲಿ' ಯಲ್ಲಿಯು ವಿದ್ಯಾರ್ಥಿಗೆ ಶಿಕ್ಷಣ ಕೊಡುವ ರೀತಿಯಲ್ಲಿರುವುದರಿಂದ ಇದು 'ಶಿಕ್ಷಾವಲ್ಲಿ' ಎಂದು ಪ್ರಸಿದ್ಧಿಯನ್ನು ಪಡೆದಿದೆ. ಶಿಕ್ಷಾವಲ್ಲಿಯ ಮೊದಲ ಅನುಪಾತವು ಶಾಂತಿಪಾಠದಿಂದ ಕೂಡಿದೆ. ಉಪನಿಷತ್ತುಗಳು ಬ್ರಹ್ಮವಿದ್ಯೆಯನ್ನು ಗುರು-ಶಿಷ್ಯರ ಸಂವಾದಗಳ ಮೂಲಕ ತಿಳಿಸುತ್ತವೆ. ಗುರು-ಶಿಷ್ಯರು ತಮ್ಮ ತಮ್ಮ ಈ ಜಿಜ್ಞಾಸೆಯು ಶುಭಕರವಾಗಲಿ ಎಂದು ಮಿತ್ರ, ವರುಣ, ಆರ್ಯಮಾ ಇತ್ಯಾದಿ ದೇವತೆಗಳನ್ನು ಕುರಿತಾಗಿ-

॥ **ಹರಿಃ ಓಂ** ॥

**ಶಂ ನೋ ಮಿತ್ರಃ ಶಂ ವರುಣಃ** ।

**ಶಂ ನೋ ಭವತ್ವರ್ಯಮಾ** ।

**ಶಂ ನ ಇಂದ್ರೋ ಬ್ರಹಸ್ಪತಿಃ** ।

**ಶಂ ನೋ ವಿಷ್ಣು ರುರುಕ್ರಮಃ** ॥

ಎಂಬುವುದಾಗಿ ಉಪನಿಷತ್ತಿನ ಪ್ರಾರಂಭ ಮಾಡುವುದಕ್ಕೆ ಮುಂಚೆ ಗುರು-ಶಿಷ್ಯರಿಬ್ಬರೂ ಸೇರಿಕೊಂಡು ಪ್ರಾರ್ಥನೆ ಮಾಡುತ್ತಾರೆ. ಇಂತರ ಅಪೂರ್ವ ವಿಚಾರ ಈ ಉಪನಿಷತ್ತಿನ ಮೊದಲನೇ ಅನುವಾಕದಲ್ಲೇ ಚಿತ್ರಿಸಲ್ಪಟ್ಟಿದೆ.

ವರ್ಣಾದಿ ವಿಷಯಗಳನ್ನು ವಿದ್ಯಾರ್ಥಿಯಾದವನು ಕರಗತ ಮಾಡಿಕೊಂಡ ಮೇಲೆ "ಸಹ ನೌ ಯಶಃ ಸಹ ನೌ ಬ್ರಹ್ಮವರ್ಚಸಮ್ । (ತೈ.ಉ. ಆ-೧, ಅನು-೩)?. ಶಿಷ್ಯನಾದವನು ಇಲ್ಲಿ ತನಗೆ ಹಾಗೂ ಗುರುವಿಗೆ ಯಶಸ್ಸು ಉಂಟಾಗಲಿ ಎಂದು ಪ್ರಾರ್ಥನೆ ಮಾಡುವ ಬಗೆ ವಿವರಿಸಲಾಗಿದೆ. ಇದೊಂದು ಸುಂದರವಾದ ಬಾಂಧವ್ಯದ ಪ್ರತೀಕದಂತಿದೆ.

ವೇದಾಧ್ಯಯನಕ್ಕೆ ಮುಂಚಿತವಾಗಿ ವಿದ್ಯಾರ್ಥಿಯಾದವನು ಓಂಕಾರ'ದ ಉಪಾಸನೆಯನ್ನು ಮಾಡಬೇಕೆಂಬ ವಿಧಿ ಇಲ್ಲಿ ತಿಳಿಸಲಾಗಿದೆ.

**ಓಂ ಮಿತಿ ಬ್ರಹ್ಮ** ।

**ಓಮಿತೀದಗ್‌ಂ ಸರ್ವಂ** ।

**ಓಮಿತ್ಯೇತದನುಕೃತಿ ಹ ಸ್ಮ ವಾ**

(ತೈ. ಅ-೧, ಅನು-೦೮)

ಹೀಗೆ ಮುಂದುವರೆಯುವ ಈ ಮಂತ್ರದಲ್ಲಿ ಬ್ರಹ್ಮನ ಕುರಿತಾಗಿ ಹೇಳಲಾಗಿದೆ.

'ಓಂ' ಎಂಬುದು ಬ್ರಹ್ಮ, ಇವೆಲ್ಲವೂ ಓಂ ಎಂಬುದು. ನಮ್ಮ ಎದುರಿಗೆ ಕಾಣುವ ಪ್ರಪಂಚವೆಲ್ಲ ನಾಮರೂಪದಿಂದ ಆಗಿದೆ. ಅದರ ಹಿಂದೆ ಓಂಕಾರವೇ ಇರುವುದು. ಎಂದರೆ ಪರಬ್ರಹ್ಮವೇ ಇರುವುದು. ಓಂಕಾರದ ಮಹತ್ವದ ಕುರಿತಾಗಿ 'ಮಾಂಡೋಕೋಪನಿಷತ್'ನಲ್ಲಿ ಹೀಗೆ ಹೇಳಲಾಗಿದೆ.

'ಓಂಕಾರದಲ್ಲಿ ಅ, ಉ, ಮ ಕಾರಗಳಷ್ಟೇ ಅಲ್ಲದೇ ಈ ಮೂರಕ್ಷರಗಳನ್ನು ಮಾತ್ರೆಗಳನ್ನು ಮಿಕ್ಕಿದ ನಾಲ್ಕನೆಯದೊಂದು 'ಅ' ಮಾತ್ರ ಅಂಶವು ಉಂಟೆಂದು ಹೇಳಿದೆ. 'ಓಂ' ಇದು ಚಿದವಸ್ಥೆಗಳ ಸಂಕೇತವು ಆಹುದು. (ಮಾಂ. ಮಂ-೧-೮-೧೨) ಅದೇ ರೀತಿಯಾಗಿ 'ಕಠೋಪನಿಷತ್ ನಲ್ಲಿ ಹೀಗೆ ಹೇಳಲಾಗಿದೆ.

'ಯಾವ ಪದವನ್ನು ಶೃತಿಗಳೆಲ್ಲ ಉಚ್ಚರಿಸುವವೋ ಎಲ್ಲ ತಪಸ್ಯಯ ಲಕ್ಷವಾವುದೋ, ಯಾವುದನ್ನಪೇಕ್ಷಿಸಿ ಎಲ್ಲರೂ ಬ್ರಹ್ಮಚರ್ಯವನ್ನಾಚರಿಸುವರೋ ಆ ಬೀಜಾಕ್ಷರವನ್ನು ಹೇಳುವೆ ಕೇಳು ಅದು 'ಓಂ' ಎಂಬುದು. ಅದುವೇ ಅಕ್ಷರ ಬ್ರಹ್ಮವು, ಅದುವೇ ತುರಿಯ ಸಂಕೇತವು, ಅದುವೇ ಕಾಮಧೇನುವು' (ಕಠ, ಅ-೧, ವ-೨. ಮಂ.-೧೫, ೧೬)

ಶ್ರೀಕೃಷ್ಣನು ಗೀತೆಯಲ್ಲಿ ತಪಸ್ಸು, ಯಜ್ಞ, ದಾನ, ಕ್ರೀಯೆ ಇವುಗಳನ್ನೆಲ್ಲ 'ಓಂ'ಕಾರದ ಉಚ್ಚಾರ ಮಾಡಿ ಮಾಡಬೇಕು. (ಗೀತಾ-೧೭-೨೪).

ಒಟ್ಟಿನಲ್ಲಿ ಗುರುಕುಲದಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಯು ವೇದಾಧ್ಯಯನಕ್ಕಿಂತ ಮುಂಚಿತವಾಗಿ 'ಓಂ' ಕಾರದ ಉಚ್ಚಾರಣೆ ಅಗತ್ಯವಾಗಿ ಮಾಡಬೇಕಾಗಿತ್ತು. ಗುರುಕುಲದಲ್ಲಿದ್ದು ತನ್ನ ಕರ್ತವ್ಯ ನಿರ್ವಹಿಸಬೇಕಾಗಿದ್ದಿತ್ತು. ಜೀವನದ ಯಾವ ಕಾರ್ಯದಲ್ಲಿ ಒಬ್ಬ ನಿರತನಾಗಿರಲಿ, ಈ ಎರಡನ್ನು ಬಿಡಕೂಡದು. ಅದೇ ಸ್ವಾಧ್ಯಾಯ ಮತ್ತು ಪ್ರವಚನ. ಸ್ವಾಧ್ಯಾಯ ಎಂದರೆ ಕಲಿತುಕೊಳ್ಳುವುದು. ಪ್ರವಚನ ಎಂದರೆ ತಾನು ಏನನ್ನು ಕಲೆತುಕೊಂಡುವನೋ ಅದನ್ನು ಇನ್ನೊಬ್ಬರಿಗೆ ಹೇಳುವುದು. ಇದು ಅತ್ಯಂತ ಮುಖ್ಯವಾದ ಕರ್ತವ್ಯವಾಗಿತ್ತು.

ಬೃಹದಾರಣ್ಯಕ ಉಪನಿಷತ್ತಿನಲ್ಲಿ ತಿಳಿಸಿರುವಂತೆ ಶ್ರವಣ, ಮನನ, ನಿಧಿಧ್ಯಾಸನ ಈ ಮೂರು ಹಂತಗಳು ಕಲಿಕೆಯ ಪ್ರಕ್ರಿಯೇಯಲ್ಲಿ ಮುಖ್ಯ ಹಂತಗಳಾಗಿದ್ದವು. ಹೀಗೆ ವಿವಿಧ ಉಪನಿಷತ್ತುಗಳಲ್ಲಿ ವಿದ್ಯಾರ್ಥಿಗಳ ಕರ್ತವ್ಯವನ್ನು ಹೇಳಲಾಗಿದೆ. ಉಪನಿಷತ್ ಕಾಲದ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಯ ಅಭ್ಯಾಸವು ಮುಗಿದ ನಂತರ ಗುರುವಾದವನು 'ಸಮಾವರ್ತನ' ಸಮಾರಂಭವನ್ನು ಏರ್ಪಡಿಸಿ, ವಿದ್ಯಾರ್ಥಿಗಳು ಮುಂದಿನ ಜೀವನದಲ್ಲಿ ನಿರ್ವಹಿಸಬೇಕಾದ ಎಚ್ಚರಿಗೆ ಮಾತುಗಳನ್ನು ನಿವೇದಿಸುತ್ತಿದ್ದರು.

**ವೇದಮನೂಚ್ಯಾಚಾರ್ಯೋಂತೇ ವಾಸಿನಮನುಶಾಸ್ತಿ** ।

**ಸತ್ಯಂ ವದಃ ಧರ್ಮಂ ಚರಃ ಸ್ವಾಧ್ಯಾಯನ್ನಾ ಪ್ರಮದಃ** ।

ಎಂಬುದಾಗಿ ಗುರುವಾದವನು ವಿದ್ಯಾರ್ಥಿಗೆ ಕೊಡುವ ಹಿತವಚನ ಇದಾಗಿದೆ.

'ಸತ್ಯವನ್ನು ಹೇಳು, ಧರ್ಮವನ್ನು ಆಚರಿಸು. ಅಧ್ಯಯನದಲ್ಲಿ ಪ್ರಮಾದ ಮಾಡಬೇಡ. ಸ್ವಾಧ್ಯಾಯ ಪ್ರವಚನಗಳಿಂದ

ಕದಲಕೂಡದು' ಎಂಬ ವಿಚಾರ (ತೈ.ಉ. ಅ-೧, ಅನು-೧೧) ವಿಷದಿಪಡಿಸಲಾಗಿದೆ.

ವ್ಯಕ್ತಿಯ ವಿಕಾಸವಾಗುವ ನಿಟ್ಟಿನಲ್ಲಿ ಅಂದಿನ ಶಿಕ್ಷಣ ಕ್ರಮ ಹಚ್ಚುಕಟ್ಟಾದ ವ್ಯವಸ್ಥೆ ರೀತಿಯಿಂದ ವಿಧಿ-ವಿಧಾನಗಳನ್ನು ಏರ್ಪಡಿಸಿತ್ತು. ಹೀಗೆ ಉಪನಿಷತ್ತು ಕಾಲದಲ್ಲಿ ವಿದ್ಯಾರ್ಥಿ ಜೀವನದ ಅವಧಿಯು ೧೨ ವರ್ಷಗಳ ಕಾಲ ನಡೆಯುತ್ತಿತ್ತು. ಈ ಕಾಲದಲ್ಲಿ ವಿದ್ಯಾರ್ಥಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿತ್ತು. ಉಪನ್ಯಾಸದ ಪದ್ಧತಿಯ ಹೊರತಾಗಿ ಪ್ರಶ್ನೋತ್ತರ ಪದ್ಧತಿಯು ಮಹತ್ವ ಪಡೆದಿತ್ತು. ಈ ವಿಧಾನದ ಮೂಲಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲಾಗುತ್ತಿತ್ತು.

## ಶಿಕ್ಷಣ ಸಂಸ್ಥೆಗಳ ಸ್ಥಾನ :

ಗುರುಗಳು ಆದರ್ಶ ಬದುಕಿನ ಬೆಳಕಿನಲ್ಲಿ ವಿದ್ಯಾರ್ಥಿಯ ವ್ಯಕ್ತಿತ್ವವು ರೂಪಿಸಲ್ಪಡಬೇಕೆಂಬ ಉದ್ದೇಶದಿಂದಾಗಿ 'ಗುರುಕುಲವಾಸ' ಪದ್ಧತಿಯು ರೂಢಿಯಲ್ಲಿ ಬಂದಿತು. ಗುರುಗಳು ವಿದ್ಯಾರ್ಥಿಗಳಿಗೆ ಮಾದರಿಯಾಗಿರುತ್ತಿದ್ದರು. ಈ ಗುರುಕುಲಗಳು ಕೌಟಂಬಿಕ ನಿವಾಸಗಳು ಆಗಿದ್ದವು, ಅಲ್ಲಿರುವ ವಿದ್ಯಾರ್ಥಿಗಳು ಯಾವತ್ತು ೧೨ ವರ್ಷಗಳ ಕಾಲ ಗುರುಕುಲದ ಗೋವುಗಳ ಸಾಕಣೆ, ಸೌದೆ ಸಂಗ್ರಹ ಹಾಗೂ ನಂದಾದೀಪದ ರಕ್ಷಣೆ ಮುಂತಾದ ಕಾರ್ಯಗಳನ್ನು ನೆರವೇರಿಸುತ್ತ ವಿದ್ಯಾಭ್ಯಾಸ ಮಾಡುತ್ತಿದ್ದರು.

ಉನ್ನತ ವ್ಯಾಸಂಗದ ವಿದ್ಯಾರ್ಥಿಗಳು ಒಂದೆಡೆ ಸೇರಿ ತಮ್ಮ ಜ್ಞಾನ ತೃಷೆಯನ್ನು ತೃಪ್ತಿ ಪಡಿಸಿಕೊಳ್ಳಲು ಯತ್ನಿಸುತ್ತಿದ್ದ ನಿಗದಿತ ವೇದಿಕೆಗಳು 'ಪರಿಷತ್' ಗಳು ಎಂದು ಕರೆಯಲ್ಪಡುತ್ತಿದ್ದವು. ಉಪನಿಷತ್ ಕಾಲದ ಶಿಕ್ಷಣ ಪದ್ಧತಿಯನ್ನು ಅವಲೋಕಿಸಿ ನೋಡಿದಾಗ ವೇದ ಕಾಲದ ಶಿಕ್ಷಣ ಪದ್ಧತಿಗಿಂತ ಸ್ವಲ್ಪ ಮುಂದುವರೆದ ಶಿಕ್ಷಣವೆಂದೇ ಹೇಳಬಹುದು.

## ಆಧುನಿಕ ಶಿಕ್ಷಣ ಪದ್ಧತಿಗೆ ಪೂರಕವಾಗುವ ಉಪನಿಷತ್ತಿನ ವಿಚಾರಗಳು:

ಪ್ರಾಚೀನ ಭಾರತದ ಶಿಕ್ಷಣ ವ್ಯವಸ್ಥೆ ಇಂದಿನ ಶಿಕ್ಷಣ ವ್ಯವಸ್ಥೆಗೆ ಮಾರ್ಗದರ್ಶನವಾಗಿದೆ. ಅಂದು ಶಿಕ್ಷಣ ಮತ್ತು ಶಿಕ್ಷಣ ಸಂಸ್ಥೆಗಳು ಬಹಳಷ್ಟು ಕಟ್ಟು-ನಿಟ್ಟಿನ ನಿಯಮಗಳನ್ನು ಪಾಲಿಸಿಕೊಂಡು ಬರುತ್ತಿದ್ದವು. ಇಂದು ಸಹ ಇದೇ ಪದ್ಧತಿ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಇರುವುದು.

ಶಿಕ್ಷಣ ಸಂಸ್ಥೆಗಳು ಸಮಾಜ, ಸಮುದಾಯ, ರಾಜ್ಯ, ರಾಷ್ಟ್ರದ ಬೆಳವಣಿಗೆಗೆ ಪ್ರೇರಕಶಕ್ತಿಯಾಗಿವೆ. ಈ ಉನ್ನತವಾದ ವಿಚಾರವನ್ನು ಇಟ್ಟುಕೊಂಡು ಇಂದಿನ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು ತಂತ್ರಜ್ಞಾನ ಮತ್ತು ವೈಜ್ಞಾನಿಕ ಕಲ್ಪನೆಗಳನ್ನು ಅಳವಡಿಸಿವೆ. ತನ್ಮೂಲಕ ವಿದ್ಯಾರ್ಥಿಗಳಲ್ಲಿರುವ ಅಂತಃ ಶಕ್ತಿಯನ್ನು ವೃದ್ಧಿಸುವಲ್ಲಿ ಕಾರ್ಯೋನ್ಮುಖವಾಗಿವೆ.

ಪ್ರಾಚೀನ ಭಾರತದ ಶಿಕ್ಷಣ ವ್ಯವಸ್ಥೆಯ ಧರ್ಮ ಮತ್ತು ಅಧ್ಯಾತ್ಮದ ಭದ್ರ ತಳಹದಿಯ ಮೇಲೆ ಬೆಳೆದು ಬಂದಿತ್ತು. ಈಗ ಸಮಾಜದಲ್ಲಿ ಉತ್ತಮ ಆದರ್ಶಗಳು ಇವೆ. ಅವುಗಳನ್ನು ಪುನರುಜ್ಜಿವನಗೊಳಿಸುವ ಧೀ. ಶಕ್ತಿಯ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಇಂದಿನ ಕಾಲದಲ್ಲಿರುವ ವಿವಿಧ ವಿಶ್ವವಿದ್ಯಾಲಯಗಳು 'ಗುರುಕುಲ'ದ ಪದ್ಧತಿಯನ್ನು ಅಳವಡಿಸುತ್ತಿವೆ. ಅದರಂತೆ ಕೆಲವು ಶಿಕ್ಷಣ ಸಂಸ್ಥೆಗಳು ಉಪನಿಷತ್ ಕಾಲದ ಆಹಾರ- ವಿಹಾರ, ಯೋಗ-ಶಿಕ್ಷಣ ಪದ್ಧತಿಗಳನ್ನು ಅಳವಡಿಸಿ ಭವ್ಯ ಭಾರತವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿವೆ.

ಬಿರ್ಲಾಸ್ಕೂಲಗಳು, ಸ್ವಾಮಿ ನಾರಾಯಣ ಫೌಂಡೇಶನ ನಡೆಸುವ ಶಿಕ್ಷಣ ಕೇಂದ್ರಗಳು ಈ ವಿಚಾರಕ್ಕೆ ಉತ್ತಮ ನಿದರ್ಶನಗಳೆನ್ನಬಹುದು. ಅಂದಿನ ಶಿಕ್ಷಣ ಪದ್ಧತಿಯಲ್ಲಿ ಸಂಸ್ಕೃತ ಭಾಷೆಯು ಬೋಧನಾ ಮಾಧ್ಯಮವಾಗಿತ್ತು. ಈಗ ಪ್ರಾದೇಶಿಕ ಭಾಷೆ ಒಳಗೊಂಡಂತೆ ಇಂಗ್ಲೀಷ ಭಾಷೆ ಪ್ರಭುತ್ವದಲ್ಲಿದೆ.

ಇಂದಿಗೂ ಕೂಡ ಉಪನಿಷತ್ತುಗಳು ಸರಿಯಾದ ಕ್ರಮದಲ್ಲಿ ಶಿಕ್ಷಣ ನೀಡಲು ಪೂರಕವಾದ ವಿಚಾರಗಳನ್ನು ಒದಗಿಸುತ್ತವೆ. ಉತ್ತಮ ಮೌಲ್ಯಗಳನ್ನು ವೃದ್ಧಿಸಿಕೊಳ್ಳಲು ಉಪನಿಷತ್ತುಗಳು ಸಹಕಾರಿಯಾಗಿವೆ. ಆಧುನಿಕ ಕಾಲದ ಶಿಕ್ಷಣ ತಜ್ಞರಾದ 'ರಸ್ಕ' 'ಜೇಮ್ಸ್‌ರಾಶ್' 'ಪ್ಲೋಟೊ' ಮುಂತಾದ ಪಾಶ್ಚಾತ್ಯರು ಸಂಸ್ಕೃತಿಯ ಮೂಲಕ ಮಾನವ ಕೋಟಿಯು ಆಧ್ಯಾತ್ಮ ಪ್ರಪಂಚವನ್ನು ಪ್ರವೇಶಿಸಿ ಹಾಗೂ ಅದನ್ನು ವಿಸ್ತರಿಸುವಂತೆ ಮಾಡಲು ಶಿಕ್ಷಣವು ಸಹಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಉಪನಿಷತ್ ಕಾಲದ ಭಾರತದ ಶಿಕ್ಷಣ ಕ್ರಮವು ವ್ಯಕ್ತಿ ಮತ್ತು ಸಮಾಜಗಳೆರಡನ್ನು ಉದ್ಧರಿಸುವ ಆಶಯದೊಂದಿಗೆ ಕಾರ್ಯ ಮಾಡಿತ್ತು. ಅಂದಿನ ಶಿಕ್ಷಣದ ದೂರದೃಷ್ಟಿಕೋನ ಆಧುನಿಕ ಶಿಕ್ಷಣ ಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತಿದೆ ಎಂದರೂ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ.

## ಉಪಸಂಹಾರ :

ನಮ್ಮ ಭವ್ಯ ಭಾರತದ ನಿರ್ಮಾಣವನ್ನು ಇಂದಿನ ಶಿಕ್ಷಕರೇ ಮಾಡಬೇಕಾದದ್ದು ಅವಶ್ಯಕವಾಗಿದೆ. 'ಗುರುಃ ಬ್ರಹ್ಮಾ' ಎಂಬ ಧ್ಯೆಯ ವಾಕ್ಯವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ವಿದ್ಯಾರ್ಥಿಗಳನ್ನು ಭವ್ಯ ಭಾರತದ ಸತ್ಪಜೆಗಳನ್ನಾಗಿಸುವ ಹೊಣೆಗಾರಿಕೆಯಿದೆ. ಇದರಿಂದ ಪರಂಪರಾನುಗತ ಸಂಸ್ಕೃತಿಯ ಮೌಲ್ಯಗಳ ಉತ್ತಮಾಂಶಗಳನ್ನು ವೈಜ್ಞಾನಿಕ ದೃಷ್ಟಿಕೋನಗಳಿಂದ ಪುರಸ್ಕರಿಸಿ, ಸಮನ್ವಯಗೊಳಿಸಿ ದೇಶದ ವಿವಿಧ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಮರ್ಥರಾಗಬೇಕು ಉಪನಿಷತ್ತುಗಳಲ್ಲಿ ಹೇಳಲಾದ ಆದರ್ಶ ಮೌಲ್ಯಗಳ ಬಗೆಗೆ ಪರಿಚಯಪಡೆದು ಇಂದಿನ ವಿದ್ಯಾರ್ಥಿಗಳಿಗೆ ಧಾರೆ ಎರೆದರೆ, ಯೋಗ್ಯ ರಾಷ್ಟ್ರ ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲ.

## ಉಲ್ಲೇಖಗಳು :


- ಉಪನಿಷತ್ಪ್ರಸ್ಥಾನ – ಪ್ರ:- ಅಖಿಲ ಭಾರತ ಮಾಧ್ವ ಮಹಾಮಂಡಲ, ಬೆಂಗಳೂರು – ೧೯೭೮
- ಉಪನಿಷತ್ ಭಾವಧಾರೆ – ಸೋಮನಾಥಾನಂದ, ಶ್ರೀರಾಮಕೃಷ್ಣಾಶ್ರಮ, ಮೈಸೂರು (೧೦ನೇ ಮುದ್ರಣ) ೨೦೧೩.
- ಉಪನಿಷತ್ ರಹಸ್ಯವು – ಪ್ರೊ॥ ರಾ.ದ. ರಾನಡೆ. ಅನು: ಶ್ರೀರಂಗನಾಥ, ರಾ. ದಿವಾಕರ ಹಾಗೂ ಇತರರು. ಶ್ರೀ ಗುರುದೇವ ರಾನಡೆ ಸಮಾಧಿ ಟ್ರಸ್ಟ್ ಬಿಜಾಪೂರ – ೧೯೯೯.
- ವೇದ ವಾಙ್ಮಯ ಮತ್ತು ಉಪನಿಷತ್ತುಗಳು – ಸಾ.ಕೃ. ರಾಮಚಂದ್ರರಾವ ಅಂಕಿತ ಪುಸ್ತಕ ಬೆಂಗಳೂರು (೨ನೇ ಮುದ್ರಣ) ೨೦೦೫.

- ಶ್ರೀಮದ್ಭಗವದ್ಗೀತೆ – ಗೀತಾ ಪ್ರೇಸ್, ಗೋರಖಪುರ (೧೭ನೇ ಮುದ್ರಣ) – ೨೦೦೮.
- ತೈತ್ತಿರೀಯೋಪನಿಷತ್ತಿಗೆ ಆಚಾರ್ಯ ಶಂಕರ–ಮಧ್ವರ ಭಾಷ್ಯಗಳು – ಒಂದು ತುಲನಾತ್ಮಕ ಅಧ್ಯಯನ (ಸಂಶೋಧನಾ ಪ್ರಬಂಧ) – ಶ್ರೀ ಯೋಗೇಶ, ಮೋ, ಜೋಶಿ, – ಗು. ವಿ. ಗು. – ೨೦೦೮.
- ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ – ಲೇ– ಡಾ॥ ಎಸ್.ಬಿ. ಯಾದವಾಡ, ವಿದ್ಯಾನಿದಿ ಪ್ರಕಾಶನ ಗದಗ (ಪರಿಷ್ಕೃತ ಆವೃತ್ತಿ) – ೨೦೦೭.
- ಪ್ರಗತಿಪರ ಭಾರತದಲ್ಲಿ ಶಿಕ್ಷಣ – ಪ್ರೋ. ಶಂಕರಲಿಂಗ ಜಿ. ಹೆಂಬಾಡಿ, ಮಾಕಾ ಪ್ರಕಾಶನ, ರಾಂಪೂರ, ಜಿ॥ ಗುಲಬರ್ಗಾ (ಪ್ರಥಮ ಮುದ್ರಣ).
- ಉದಯೋನ್ಮುಖ ಭಾರತದಲ್ಲಿ ಶಿಕ್ಷಣ – ರುದ್ರೇಶ ಬಿ.ಎಸ್. ವಿದ್ಯಾನಿಧಿ ಪ್ರಕಾಶನ ಗದಗ (ಹೊಸ ಆವೃತ್ತಿ) -೨೦೦೪.
- ಶಿಕ್ಷಣದಲ್ಲಿ ತತ್ವಶಾಸ್ತ್ರ ಮತ್ತು ಸಮಾಜಶಾಸ್ತ್ರ – ಪಿ.ನಾಗರಾಜ. ವಿದ್ಯಾನಿಧಿ ಪ್ರಕಾಶನ ಗದಗ (೨ನೇ ಆವೃತ್ತಿ) ೨೦೦೬–೦೭.


## Research Question:

# A Comparative Research Agenda on the Gurukula and Macaulay Systems of Education

These Research Questions propose some focused and empirically based research agenda to study the outcomes of the Gurukula system of education in India, as it is practiced today, in comparison with the Macaulay system. Despite frequent references to the Gurukula tradition in policy and public discourse, there is little systematic research that evaluates its contemporary educational outcomes using rigorous and comparable methods. This gap presents valuable opportunities for coordinated research efforts. Some possible researches could be as follows:

* To examine differences in learning outcomes and cognitive development between the two systems. Researchers can investigate whether Gurukula-based pedagogy leads to deeper conceptual understanding, stronger long-term retention, greater attention control, and improved self-regulated learning when compared with examination-driven schooling. Such work can take up tools from educational psychology and cognitive science to assess learning depth rather than surface performance.

* To study the ethical formation, psychosocial well-being, and teacher–student relationships. This includes studying moral reasoning, sense of responsibility, emotional resilience, stress levels, and perceived meaning in education. Given growing global concern about student well-being, this work could connect indigenous educational practices with international debates on holistic and values-based education.

* To explore long-term life outcomes of alumni from Gurukula and Macaulay systems. Researchers can investigate differences in civic engagement, lifelong learning orientation, career choices, and societal contribution, adopting a broad understanding of educational success beyond employability or income.

These research directions call for mixed-methods, comparative studies involving currently functioning Gurukulas and socio-economically matched mainstream schools; preferably multi-centered. By generating outcome-based evidence rather than normative claims, such research can contribute meaningfully to educational theory, policy, and reform debates in India and beyond. It is appropriate to develop suitable questionnaire for the purpose. The larger message is that education must be studied not only as a system for skill transmission, but as a formative process shaping cognition, character, and life purpose.

**Cite this Research Question:** B P Hari Chandra, "A Comparative Research Agenda on the Gurukula and Macaulay Systems of Education", Purnam, Vol.1, No.2., pp20, 2025